(MADAM SPEAKER)

I am sure the Hous will join me in expressing our sense of sorow on the passing away of Sriyuths C. Rajagopalachari, Ayyangowda, M. S. Patil and B. L Bayanna.

I request the members to stand in silence for a minute as a mark of respect to the deceased.

*(Members stood in silence for a minnte)*

## STARRED QUESTIONS

### (to which oral Answers were given)

### Unauthorised Cultivation of Tank Beds in Gubbi Taluk

56. Sri GATTI CHANDRASEKAR (Gubbi).—

Will the Minister for Revenue be pleased to state.—

(*a*) whether it has come to the notice of the Government that the tank beds in Gubbi Taluk are un-authorised cultivations ;

(*b*) whether it has come to the notice of the Government that the tanks are beings silted up on account of this ;

(*c*) the action the Government propose to take against such unauthorised cultivators ?

Sri N. HUTCHAMASTHY GOWDA (Minister for Revenue).—

(*a*) It has come to the notice of the Deputy Commissioner, Tumkur District.

(*b*) It has come to the notice of the Deputy Commissioner, Tumkur District.

(*c*) Action is being taken to levy fine from unauthorised cultivators and also to evict them from the said tank beds.

ಶ್ರೀ ಗಟ್ಟಿ ಚಂದ್ರಶೇಖರ್.—ಕೆರೆ ಅಂಗಳದಲ್ಲಿ ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿದ್ದಾರೆ. ಅವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಗುಬ್ಬಿ ತಾಲ್ಲೂಕಿನಲ್ಲಿ 51 ಜನ ಈ ರೀತಿ ಅಕ್ರಮವಾಗಿ ಕೆರೆ ಅಂಗಳಗಳನ್ನು ಒತ್ತುವರಿ ಮಾಡಿಕೆ ಮಾಡಿದ್ದಾರೆ. ತೋಟ ಮಾಡಿರಲು, ಬೇರೆ ಬೇರೆ ಹೈರು ಹಾಕಕೊಳ್ಳುತ್ತಿರಲು, ಈ ಜಮೀನುಗಳಂಥ ಅವರನ್ನು ಬಿಡುಗಡೆ ಮಾಡಿಸುವುದಕ್ಕೆ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿಗಳು ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಗಟ್ಟಿ ಚಂದ್ರಶೇಖರ್.—ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಎಷ್ಟು ದಿವಸಗಳಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಅಕ್ರಮ ಸ್ವಾಧೀನ ಮಾಡಿಕೊಂಡಿರುವ ವಿಷಯದಲ್ಲಿ ಯಾವ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನುವುದಕ್ಕೆ ಕೆಲವು

† Indicates that the remarks or speeche have not been revised by the member concerned.

ರೂಲ್ಸ್ ಇವೆ. ಆ ರೂಲ್ಸ್ ಪ್ರಕಾರ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಅಂಥದೇನಾದರೂ ಯಾವುದಾದರೂ ಸಂದರ್ಭದಲ್ಲಿ ಕ್ರಮ ತೆಗೆದುಕೊಳ್ಳದೆ ಇದ್ದರೆ, ಜಿಲ್ಲಾಧಿಕಾರಿಗಳಿಗೆ ತಿಳಿಸಿ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಗೊತ್ತು ಮಾಡುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ.—ತಾಲ್ಲೂಕಿನಲ್ಲಿ ಭೂ ಹೀನರು ಅಕ್ರಮವಾಗಿ 8-10 ವರ್ಷದಿಂದ ಸಾಗುವಳಿ ಮಾಡುತ್ತಿದ್ದು, ತೆಂಗಿನತೋಟ, ಅಡಕೆ ತೋಟ ಮಾಡಿದ್ದರೆ ಅವರನ್ನು ಸಹಿತ ಅದರಿಂದ ಹೊರಕ್ಕೆ ಹಾಕಲಕ್ಕೆ ಯೋಚನೆ ಮಾಡಿದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೆರೆ ಅಂಗಳಕ್ಕೂ ಅದಕ್ಕೂ ಸಂಬಂಧವಿಲ್ಲ,

ಶ್ರೀ ಕೆ. ಎಚ್. ಹನುಮೇಗೌಡ.—ಕೆರೆ ತುಂಬದ ಮೇಲೆ ನೀರು ಇಲ್ಲದೆ ಇರತಕ್ಕ ಕೆರೆ ಅಂಗಳ ಹತ್ತಾರು ಎಕರೆ ಇದೆ. ಅಂಥ ಪ್ರದೇಶವನ್ನು ವ್ಯವಸಾಯಕ್ಕೆ ಕೊಡುವುದಕ್ಕೆ ಆರೋಜನೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಕೆರೆ ಅಂಗಳ ಎಂದು ಒಂದು ಸಾರಿ ಗೊತ್ತಾದ ಮೇಲೆ ಅದನ್ನು ಯಾವ ಕಾರಣಕ್ಕೇ ಆದರೂ ಕೊಡುವುದು ಸೂಕ್ತವಲ್ಲ ಎನ್ನುವುದು ಸರ್ಕಾರದ ಅಭಿಪ್ರಾಯ.

ಶ್ರೀ ಎಂ. ಬಿ. ರಾಮಸ್ವಾಮಿ.—ಅನೇಕ ಶಾಸಕರು ಕೆರೆ ಅಂಗಳವನ್ನು ಒತ್ತುವರಿ ಮಾಡಿಕೊಂಡು ಪಂಪ್‌ಸೆಟ್‌ಗಳನ್ನು ಹಾಕಿಕೊಂಡಿರುವುದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ? ಅಂಥ ವಿಷಯಗಳನ್ನು ತಮ್ಮ ಗಮನಕ್ಕೆ ತಂದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಶಾಸಕ ಸಭಾ ಸದಸ್ಯರಾಗಿರತಕ್ಕವರಾಗಲೀ, ಹಿಂದೆ ಇದ್ದವರಾಗಲೀ, ಅದರ ಆಧಾರದ ಮೇರೆ ಒಬ್ಬರಿಗೊಬ್ಬರಿಗೆ ತಾರತಮ್ಯ ಮಾಡುವ ಹಾಗೆಯೇ ಇಲ್ಲ. ನಿರ್ದಿಷ್ಟವಾದ ಕೆಲವು ನಿಯಮಗಳನ್ನು ಮಾಡಿದ್ದೇವೆ. ಆ ನಿಯಮಗಳಿಗೆ ವಿರೋಧವಾಗಿ ಭೂಮಿಯನ್ನು ಅಕ್ರಮಿಸಿಕೊಂಡಿರತಕ್ಕವರ ಮೇರೆ, ಎಲ್ಲರಿಗೂ ಒಂದೇ ವಿಧವಾಗಿ ಅನ್ವಯವಾಗುವಂತೆ ಕ್ರಮ ತೆಗೆದುಕೊಳ್ಳುತ್ತೇವೆ.

## Appointment of Receptionists in Taluk Offices

57. Sri GATTI CHANDRASEKHAR (Gubbi).—

Will the Minister for Revenue be pleased to state:—

whether it is under the consideration of the Government to appoint receptionist in Taluk Offices also as is done in many offices and factories, so as to assist the innocent Ryots in getting their work done ?

Sri N. HUTCHAMASTHY GOWDA (Minitser for Revenue).—

No.

ಶ್ರೀ ಗಟ್ಟಿ ಚಂದ್ರಶೇಖರ್.—ತಾಲ್ಲೂಕು ಆಫೀಸುಗಳಲ್ಲಿ ಒಬ್ಬ ರೈತ ಬಂದರೆ ಅವನು ಎಲ್ಲಿಗೆ ಹೋಗಬೇಕು, ಎಲ್ಲಿ ಅವನು ಕೆಲಸವಾಗಬಹುದು ಎನ್ನುವುದು ಗೊತ್ತಾಗುವುದಿಲ್ಲ. ತಹಸೀಲ್ದಾರರ ಕಚೇರಿಯಲ್ಲಿ ಡವಾಲ ತಹಸೀಲ್ದಾರರ ಮರ್ಜಿಯನ್ನು ಅನುಸರಿಸಿ ದಿವಸ ಗಟ್ಟಲೆ ಕಾಯಬೇಕು ಆಥವಾ ಸ್ವಲ್ಪೀಯ ಪುಡಾರಿಗಳನ್ನು ಕರೆದುಕೊಂಡು ದುಡ್ಡುಕಾಸು ಕೊಟ್ಟು ಕೆಲಸ ಮಾಡಿಸಿಕೊಂಡು ಬರಬೇಕಾದರೆ ತೊಂದರೆಯಾಗುತ್ತದೆ. ಬೆಂಗಳೂರಿನಂಥ ದೊಡ್ಡ ದೊಡ್ಡ ನಗರಗಳಲ್ಲಿ ಕಾರ್ಖಾನೆಗಳಲ್ಲಿ ಮತ್ತು ಮುಖ್ಯವಾದ ಆಫೀಸುಗಳಲ್ಲಿ ಸ್ವಾಗತಕಾರರಿರುತ್ತಾರೆ. ಯಾರಾದರೂ ಬಂದ ತಕ್ಷಣ ಅವರ ಕೆಲಸವೇನು ಎಂದು ವಿಚಾರಿಸಿ ಬಹಳ ಜಾಗ್ರತೆಯಾಗಿ ಇನ್ನೊಬ್ಬರು ಬರುವುದರೊಳಗಾಗಿ ಅವರನ್ನು ಮುಂದಕ್ಕೆ ಕಳುಹಿಸುತ್ತಾರೆ. ಆದೇ ರೀತಿ ತಾಲ್ಲೂಕು ಆಫೀಸುಗಳಲ್ಲಿ ಕೂಡ ಒಬ್ಬ ಸ್ವಾಗತಕಾರನನ್ನು ಹಾಕುವ ವ್ಯವಸ್ಥೆಯನ್ನು ಮಾಡಿದರೆ ನಿಜವಾಗಿ ನಾವು ಗಬರೀ ಹೆಣಾವೊ ಮಾಡುವುದಕ್ಕೆ ಸಾಧ್ಯವಾಗುತ್ತದೆಯಾದ್ದರಿಂದ ಇದನ್ನು ಕಾರ್ಯಗತ ಮಾಡಿಕೊಡುತ್ತೀರಾ ?